**ಮೂ.ದಾ.ನಂ. 70/2020**

ಪಿ.ಡಬ್ಲ್ಯು 1

(ಇಂದು ದಿನಾಂಕ: **02-06-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ. ಎಮ್ ಜಿ ಎಸ್ ವಕೀಲರಿಂದ–**

ವಾದಿಯರಲ್ಲಿ 1 ರಿಂದ 3ನೇ ವಾದಿಯರು ಹಾಗೂ 9ನೇ ವಾದಿಯರ ಕುಟುಂಬವು ಬೇರೆ ಬೇರೆಯಾಗಿರುತ್ತದೆ ಎಂದರೆ ಸಾಕ್ಷಿಯು ಅವರ ಮನೆ ಬೇರೆ ನಮ್ಮ ಮನೆ ಬೇರೆ ಎಂದು ನುಡಿಯುತ್ತಾರೆ. ನಾವು ಬೇರೆ ಬೇರೆ ಮೂಲ ಪುರುಷನ ಕವಲಿನಿಂದ ಬಂದವರು ಎಂದರೆ ಸರಿ. ನಾವು ಗೋಕರ್ಣದಲ್ಲಿ 200-300 ವರ್ಷದಿಂದ ಮನೆಯನ್ನು ಮಾಡಿಕೊಂಡು ಬಂದು ವಾಸ್ತವ್ಯ ಮಾಡಿಕೊಂಡು ಬಂದಿರುತೆತೇವೆ. ಅದೇ ರೀತಿಯಾಗಿ ಪ್ರತಿವಾದಿಯರು ಸಹ 200-300 ರಿಂದ ಮನೆಯನ್ನು ಮಾಡಿಕೋಂಡು ಬಂದಿರುತ್ತಾರೆ ಎಂದರೆ ಸರಿ. ನಾವೆಲ್ಲರೂ ಬೇರೆ ಬೇರೆ ಮನೆಯನ್ನು ಮಾಡಿಕೊಂಡು ಬಂದವರು ಎಂದರೆ ಸರಿ. ಅದೇ ರೀತಿಯಾಗಿ ನಾವು ನಮ್ಮ ಜಮೀನನ್ನು ಪ್ರತ್ಯೇಕವಾಗಿ ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 3ನೇ ವಾದಿಯರ ಕುಟುಂಬಕ್ಕೆ ಎಷ್ಟು ಆಸ್ತಿ ಇದೆ ಎಂಬ ಬಗ್ಗೆ ಅವರನ್ನು ಕೇಳಿ ತಿಳಿದುಕೊಳ್ಳಬೇಕು. ಈ ದಾವೆಯಲ್ಲಿ ನಾವು 4 ರಿಂದ 9 ನೇ ಪ್ರತಿವಾದಿಯರ ಕುರಿತಾಗಿ ಸಾಕ್ಷಿ ನುಡಿಯುತ್ತಿದ್ದೇನೆ.

ನಮ್ಮ ಕುಟುಂಬದ ಆಸ್ತಿಯನ್ನು ನಾವು 1ನೇ ವಾದಿ ಹಾಗೂ ಪ್ರತಿವಾದಿಯರೊಂದಿಗೆ ವಾಂಟಣಿಯನ್ನು ಮಾಡಿಕೊಂಡಿರುವುದಿಲ್ಲ. ದಾವಾ ಆಸ್ತಿಯು ಮೂಲತಃ ಕಾರಂತರಿಗೆ ಸಂಬಂಧಿಸಿದ ಆಸ್ತಿ ಆಗಿರುತ್ತದೆ. ನಾನು ಕಾರಂತರಿಗೆ ಗೇಣಿ ಪಾವತಿಯನ್ನು ಮಾಡಿದ ಕುರಿತಾಗಿ ನ್ಯಾಯಾಲಯಕಲ್ಕೆ

ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ವಕೀಲರು ಕೇಳಿದ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಕಾರಂತರು ನಾವು ಗೇಣಿಯನ್ನು ಪಾವತಿಸಿದ ಕುರಿತಾಗಿ ನನಗೆ ಹಾಗೂ ನನ್ನ ಪೂರ್ವಜರಕ್ಕೆ ನೀಡಿದಂತಹ ಯಾವುದೇ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾಗ ಆಸ್ತಿಯಾದ ಸರ್ವೆ ನಂಬರ 323 ಹಿಸ್ಸಾ 11 ಇರುತ್ತದೆ. ಸರ್ವೆ ನಂಬರ 323 ಹಿಸ್ಸಾ 11, 1973 ನೇ ಸಾಲಿನಲ್ಲಿ ಪೋಡಿ ಆಗಿರುತ್ತದೆ. ಸದ್ರಿ ಪೋಡಿ ಆದ ವಿಷಯವನ್ನು ಅಂದಾಜಿನ ಆಧಾರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿಯು 1973 ನೇ ಸಾಲಿನಲ್ಲಿ ನಮೂನೆ 7 ನ್ನು ತುಂಬಿದ ಕುರಿತಾಗಿ ನೆನಪು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ 323 ಹಿಸ್ಸಾ 11 1973-74 ನೇ ಸಾಲಿನ ಪೂರ್ವದಲ್ಲಿ ಯಾವ ಸರ್ವೆ ನಂಬರನಿಂದ ಹಿಸ್ಸಾ 11 ಆಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ಸರ್ವೆ ನಂಬರ 323 ಹಿಸ್ಸಾ 1 ಎಂಬುವುದು 1984 ರ ನಂತರದಲ್ಲಿ ಸರ್ವೆ ನಂಬರ 323 ಹಿಸ್ಸಾ 11 ಆಗಿತ್ತುದೆ ಎಂದರೆ ಸರಿಯಲ್ಲ. ಸರ್ವೆ ನಂಬರ 323 ಹಿಸ್ಸಾ 1 ಪೋಡಿ ಆಗುವ ಪೂರ್ವದಲ್ಲಿ ಎಷ್ಟು ವಿಸ್ತೀರ್ಣ ಹೊಂದಿತ್ತು ಎಂದರೆ ನನಗೆ ಗೊತ್ತಿಲ್ಲ. 1965 ರಿಂದ 74 ರವರೆಗೆ ಬಲೇಂದ್ರ ಗೌಡ ಇವರಿಗೆ 2 ಎಕರೆ 5 ಗುಂಟೇ 8 ಆಣೆ ಜಾಗ ಇತ್ತು ಎಂಬ ಬಗ್ಗೆ ನನಗೆ ಗೊತ್ತು. ಸರ್ವೆ ನಂಬರ 323 ಹಿಸ್ಸಾ 11 ರಲ್ಲಿ ಅಥವಾ ಸರ್ವೆ ನಂಬರ 323 ಹಿಸ್ಸಾ 1 ರಲ್ಲಿ ನನ್ನ ಪೂರ್ವಜರ ಹೆಸರು ಪಹಣಿ ಪತ್ರಿಕೆಯ 9ನೇ ಕಾಲಂನಲ್ಲಿ 1973 ರಿಂದ ದಾಖಲಾಗಿ ಬಂದಿರುತ್ತದೆ.

ನಮ್ಮ ಜಮೀನು ರೈತವಾರಿ ಹಕ್ಕಿನ ಜಮೀನು ಆಗಿರುತ್ತದೆ. ದಾವಾ ಆಸ್ತಿಯ ಪಹಣಿ ಪತ್ರಿಕೆಯ ಕಾಲಂನಲ್ಲಿ ನಂಬರ 9 ರಲ್ಲಿ ನಮ್ಮ ಪೂರ್ವಜರ ಹೆಸರು ಯಾವ ಕಾರಣಕ್ಕಾಗಿ ಕಡಿಮೆ ಆಯಿತು ಎಂಬ

**ಮೂ.ದಾ.ನಂ. 70/2020**

ಪಿ.ಡಬ್ಲ್ಯು.1

ಬಗ್ಗೆ ನಾನು ಕಂದಾಯ ಇಲಾಖೆಯಲ್ಲಿ ಕೇಳಿರುವುದಿಲ್ಲ. ಸಾಕ್ಷಿಯು ಮುಂದುವರಿದು 1992 ರವರೆಗೆ ನಮ್ಮ ಪೂರ್ವಜರ ಹೆಸರು ಪಹಣಿ ಪತ್ರಿಕೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವೆಂಕಟರಮಣ ಮಾಂಕಾಳಿ ಗೌಡಾ ಎಂಬ ನಮ್ಮ ಪೂರ್ವಜರ ಹೆಸರು 1992 ರವರೆಗೆ ಪಹಣಿ ಪತ್ರಿಕೆಯಲ್ಲಿ ಇತ್ತು. ಅವರ ಹೆಸರು ದಾಖಲೆ ಇರುವ ಕುರಿತಾಗಿ ಪಟ್ಟಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇವೆ. ವೆಂಕಟರಮಣ ಮಾಂಕಾಳಿ ಗೌಡಾ ಇವರಿಗೆ ನೀಡಲಾದ ಪಟ್ಟಾದ ಆದಸಿಾರದ ಮೇಲೆ ನಮಗೆ ದಾವಾ ಆಸ್ತಿಯ ಂ ಬರಬೇಕು ಎಂಬುವುದು ನನನ ವಾದ ಆಗಿರುತ್ತದೆ ಎಂದರೆ ಸರಿ. ಈ ವಾದವು ನನ್ನ ಹಾಗೂ 1 ರಿಂದ 3ನೇ ವಾದಿಯರ ಮಾಗಣಿ ಆಗಿರುತ್ತದೆ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ